SEVA BHARATHI
सेवा ही परमो धर्मः

ಸಂಪುಟ : 06
ಸಂಚಿಕೆ : 07

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಜುಲೈ 2025

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕಟ್ಟಡ ನಿರ್ಮಾಣಕ್ಕಾಗಿ ವಿ.ಪ. ಸದಸ್ಯರಿಂದ ರೂ. 10,00,000 ಮಂಜೂರು

ಸೆಲ್ಕೋ ಫೌಂಡೇಶನ್ ಮತ್ತು ನಿಯೋಮೋಶನ್‌ನಿಂದ ಜೀವನೋಪಾಯಕ್ಕೆ ಮಹತ್ವದ ಯೋಜನೆ

## ಸೇವಾಧಾಮದಲ್ಲಿ ನಿಯೋ ಮೋಶನ್ ವಿಥ್ ಕಾರ್ಟ್‌ನ ವಿತರಣೆ

## ಸೇವಾನಿಕೇತನಕ್ಕೆ ಬೆಳ್ತಂಗಡಿ ಶಾಸಕರ ಭೇಟಿ

## ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ACE ಡಿಸೈನರ್ ಲಿಮಿಟೆಡ್ ಸಂಸ್ಥೆಯಿಂದ ಸಿ.ಎಸ್.ಆರ್.ನ ಮೂಲಕ ರೂ. 12,00,000 ದೇಣಿಗೆ

## ಸೇವಾಭಾರತಿಯಿಂದ ಕೇಂದ್ರ ಸಚಿವರ ಭೇಟಿ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡು ನರ್ಸರಿಯ ಮೂಲಕ ಜೀವನವನ್ನು ರೂಪಿಸಿಕೊಂಡ ಚಿಕ್ಕಮಗಳೂರಿನ ನಂದನ್ ಎಚ್.ಬಿ.ಯವರ ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಕಟ್ಟಡ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ಪೂರಕವಾಗಿ ಧನ ಕ್ರೋಢೀಕರಣವು ಆಗುತ್ತಿದ್ದು ಪ್ರಯತ್ನಗಳು ನಡೆಯುತ್ತಲೇ ಇದೆ.

ಒಂದು ಕಡೆಯಿಂದ ಕೆಂಪು ಕಲ್ಲು, ಹೋಯಿಗೆಗಳು ಲಭ್ಯವಾಗದಿರುವುದು ಕೂಡ ತುಸು ಆತಂಕಕ್ಕೀಡು ಮಾಡುತ್ತಿದೆ. ಸರಕಾರವು ಈ ನಿಟ್ಟಿನಲ್ಲಿ ಒಂದು ಕಾನೂನನ್ನು ತಂದು ಸುಲಭದಲ್ಲಿ ಇವುಗಳು ಲಭ್ಯವಾಗುವಂತೆ ಮಾಡಿದಲ್ಲಿ ಸುಮಾರು ನೌಕರರಿಗೂ ಜೀವನ ನಡೆಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕಾರ್ಮಿಕ ಸಂಘಟನೆಗಳು ಜನಪ್ರತಿನಿಧಿಗಳು ಸರಕಾರವನ್ನು ಆಗ್ರಹಿಸುತ್ತಲೆ ಬರುತ್ತಿದೆ. ಪರಿಣಾಮ ಶೀಘ್ರವಾಗಿ ದೊರಕಲಿ ಎಂಬುದೇ ನಮ್ಮ ಆಶಯ.

ಕಟ್ಟಡದ ನಿರ್ಮಾಣಕ್ಕಾಗಿ ಎರಡು ಹಂತದಲ್ಲಿ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಕೆ. ಪ್ರತಾಪಸಿಂಹ ನಾಯಕ್‌ರವರು ತಮ್ಮ ಪ್ರದೇಶಾಭಿವೃದ್ಧಿ ನಿಧಿಯಿಂದ ಒಟ್ಟು 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುವುದು ನಮ್ಮ ಸೇವಾ ಕಾರ್ಯಗಳಿಗೆ ಇನ್ನಷ್ಟು ರಭಸ ದೊರಕಿದೆ. ಅವರು ಸೇವಾನಿಕೇತನ ಕಾರ್ಯಾಲಯಕ್ಕೆ ಬಂದು ಕಟ್ಟಡ ನಿರ್ಮಾಣ ಕಾರ್ಯದ ಪ್ರಗತಿಯನ್ನು ವೀಕ್ಷಿಸಿ ಶುಭ ಹಾರೈಸಿದರು. ಉಳಿದಂತೆ ಬೆಂಗಳೂರಿನಲ್ಲಿ ಕೇಂದ್ರ ಕಾರ್ಮಿಕ, ಉದ್ಯೋಗ ಸಚಿವಾಲಯ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ರಾಜ್ಯ ಸಚಿವರಾದ ಕುಮಾರಿ ಶೋಭಾ ಕರಂದ್ಲಾಜೆಯವರನ್ನು ಭೇಟಿಯಾಗಿ ಕಟ್ಟಡ ನಿರ್ಮಾಣದ ಅವಶ್ಯಕತೆಯನ್ನು ಮನಮುಟ್ಟುವಂತೆ ತಿಳಿಸಿರುತ್ತೇವೆ. ಹಾಗೇ CSR ಗಳನ್ನು ದೊರಕಿಸಿ ಕೊಡುವಂತೆ ವಿನಂತಿಸಿಕೊಂಡಿದ್ದೇವೆ. ಮಂಗಳೂರಿನ NMPT ಮತ್ತು ಉಡುಪಿ ಡಿವಿಜನ್ LIC ಯವರ ಅಧಿಕಾರಿ ತಂಡಗಳು ಕಟ್ಟಡ ನಿರ್ಮಾಣವನ್ನು ವೀಕ್ಷಿಸಿ ತೆರಳಿದ್ದು ಮುಂದಿನ ದಿನಗಳಲ್ಲಿ ಸಿಎಸ್‌ಆರ್ ಫಂಡ್ ದೊರಕುವ ಆಶಾವಾದದಲ್ಲಿ ನಾವಿದ್ದೇವೆ.

ಪ್ರತಿಯೊಂದು ದಿವ್ಯಾಂಗ ಕುಟುಂಬವು ಆರ್ಥಿಕ ವಾಗಿಯೂ ಶಕ್ತಿವಂತರಾಗಬೇಕೆಂಬ ನಿಟ್ಟಿನಲ್ಲಿ ಲೈವ್ಲಿಹುಡ್ ಪ್ರಾಜೆಕ್ಟ್ ಆಶ್ರಯದಲ್ಲಿ ನಿಯೋಮೋಶನ್ ಮತ್ತು ಸೆಲ್ಕೋ ಫೌಂಡೇಶನ್‌ನವರ ಸಹಭಾಗಿತ್ವದಲ್ಲಿ 6 ಮಂದಿ ದಿವ್ಯಾಂಗರಿಗೆ 50% ರಿಯಾಯಿತಿಯಲ್ಲಿ ಹಾಗೂ ಉಳಿದಂತೆ ಶೂನ್ಯ ಬಡ್ಡಿದರ ಸಾಲದಲ್ಲಿ 6 ಕುಟುಂಬಗಳಿಗೆ Neomotion with Cart ದೊರಕಿದ್ದು ಸರಳ ಸಮಾರಂಭದಲ್ಲಿ ವಿತರಣೆ ಮಾಡಿರುತ್ತೇವೆ. ಇದು ಆ 6 ಕುಟುಂಬಗಳ ಜೀವನೋಪಾಯಕ್ಕಾಗಿ ಆಧಾರ ವಾಗಲಿದೆ.

ಉಳಿದಂತೆ ಕ್ಷೇಮ.



ಸೇವಾ ಹೀ ಪರಮೋ ಧರ್ಮಃ
ತಾಯಿ ಭಾರತಿಯ ಸ್ಮರಣೆಗಳೊಂದಿಗೆ,
ಇತಿ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | – ಟ್ರಸ್ಟಿ |
| ಶ್ರೀ ಪೃಥ್ವೀಶ್ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ವಿಜಯ ಕೊಡವೂರು
5. ಶ್ರೀ ಆದಿತ್ಯ ಕಲ್ಲೂರಾಯ
6. ಶ್ರೀ ಕಿರಣ್ ರಾಜ್ ಕೆ.

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕಟ್ಟಡ ನಿರ್ಮಾಣಕ್ಕಾಗಿ ವಿ.ಪ. ಸದಸ್ಯರ ನಿಧಿಯಿಂದ ರೂ. 10,00,000 ಮಂಜೂರು



ಕರ್ನಾಟಕ ಸರ್ಕಾರದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಪ್ರತಾಪ ಸಿಂಹ ನಾಯಕ್‌ರವರು ಜುಲೈ 15 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ಪುನಶ್ಚೇತನ ಕೇಂದ್ರದ ಕಟ್ಟಡವನ್ನು ವೀಕ್ಷಿಸಿದರು. ಕರ್ನಾಟಕದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಪುನಶ್ಚೇತನವನ್ನು ನೀಡುವ ದೃಷ್ಟಿಯಿಂದ ಈ ಯೋಜನೆಗೆ ತಮ್ಮ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮೂಲಕ 2024–25 ಮತ್ತು 2025–26 ನೇ ಸಾಲಿನಲ್ಲಿ ಒಟ್ಟು 10 ಲಕ್ಷ ರೂಪಾಯಿಯನ್ನು ಮಂಜೂರು ಮಾಡಿರುತ್ತಾರೆ.

ಈ ಸಂದರ್ಭದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಸಂಸ್ಥೆಯ ಪರವಾಗಿ ಕೃತಜ್ಞತೆ ಸಲ್ಲಿಸಿ ಮುಂಬರುವ ದಿನಗಳಲ್ಲಿಯೂ ಸಹಕರಿಸುವಂತೆ ಮನವಿ ಮಾಡಿದರು.

# ಸೇವಾನಿಕೇತನಕ್ಕೆ ಶಾಸಕರ ಭೇಟಿ: ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ರೂ. 10 ಲಕ್ಷದ ಭರವಸೆ



ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಹರೀಶ್ ಪೂಂಜರವರು ಜುಲೈ 07 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಇಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಾಮಗಾರಿ ವೀಕ್ಷಿಸಿ ಕಟ್ಟಡ ನಿರ್ಮಾಣಕ್ಕೆ ಶಾಸಕರ ನಿಧಿಯಡಿಯಲ್ಲಿ ರೂ. 10 ಲಕ್ಷ ನೀಡುವ ಭರವಸೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

*Abled does not mean enabled. Disabled does not mean less abled*

# ಸೆಲ್ಕೋ ಫೌಂಡೇಶನ್ ಮತ್ತು ನಿಯೋಮೋಶನ್‌ನಿಂದ ಜೀವನೋಪಾಯಕ್ಕೆ ಮಹತ್ವದ ಯೋಜನೆ ಸೇವಾಧಾಮದಲ್ಲಿ 4 ಮಂದಿ ಫಲಾನುಭವಿಗಳಿಗೆ ನಿಯೋ ಮೋಶನ್ ವಿಥ್ ಕಾರ್ಟ್‌ನ ವಿತರಣೆ

**ಸೌತಡ್ಕ(ಜುಲೈ. 29) :** ಸೆಲ್ಕೊ ಫೌಂಡೇಶನ್, ಬೆಂಗಳೂರು ಮತ್ತು ನಿಯೋ ಮೋಶನ್ ಅಸಿಸ್ಟಿವ್ ಡಿವೈಸ್ ಇವುಗಳ ಆಶ್ರಯದಲ್ಲಿ ಸೇವಾಭಾರತಿ(ರಿ.), ಕನ್ಯಾಡಿ ಇದರ ಸಹಕಾರದಲ್ಲಿ ಚಕ್ರದ ಮೇಲೆ ಜೀವನೋಪಾಯ ನಿಯೋ ಬೋಲ್ಟ್ ವಿತರಣೆ ಹಾಗೂ ಸೇವಾಭಾರತಿಯ ಖಜಾಂಚಿ ಮತ್ತು ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರ ಹುಟ್ಟುಹಬ್ಬವನ್ನು ಜುಲೈ 29 ರಂದು ಸೇವಾಧಾಮ ಪುನಶ್ಚೇತನ ಕೇಂದ್ರ ಸೌತಡ್ಕದಲ್ಲಿ ಆಚರಿಸಲಾಯಿತು.

ದಿವ್ಯಾಂಗರು ಮತ್ತೆ ಸಮಾಜದತ್ತ ಬರಲು ದಿವ್ಯಾಂಗರಿಗೆ ಸ್ವ-ಉದ್ಯೋಗ ಕಲ್ಪಿಸಲು ಈ ಯೋಜನೆಯನ್ನು ರೂಪಿಸಿದ್ದು ನಿಯೋ ಮೋಶನ್ ಅಸಿಸ್ಟಿವ್ ಡಿವೈಸ್ ಇದಕ್ಕೆ ಪೂರಕವಾಗಿ ಆರ್ಥಿಕ ಸಹಕಾರ ಒದಗಿಸಿದ್ದು ಮತ್ತು ಸೆಲ್ಕೋ ಫೌಂಡೇಶನ್‌ನ ಇದು ಒಂದು ಉತ್ತಮ ಯೋಜನೆಯಾಗಿದೆ. ಇದನ್ನು ಖರೀದಿಸುವಾಗ ಒಟ್ಟು ಮೊತ್ತದಲ್ಲಿ ಶೇಕಡಾ 50% ಸೆಲ್ಕೊ ಕಂಪೆನಿಯು ಸಹಕಾರ ನೀಡುತ್ತಿದ್ದು  ಉಳಿದ ಮೊತ್ತಕ್ಕೆ ಫಲಾನುಭವಿಯ ಹೆಸರಿನಲ್ಲಿ EMI ಮಾಡಿ ತಾನೇ ದುಡಿದು ಬಾಕಿ ಮೊತ್ತ ಕಟ್ಟುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ದೃಷ್ಟಿಯಲ್ಲಿ ಆಯ್ದ ನಾಲ್ಕು ಫಲಾನುಭವಿಗಳಿಗೆ ನಿಯೋ ಮೋಷನ್ ವಿಥ್‌ಕಾರ್ಟ್ ಅನ್ನು ವಿತರಣೆ ಮಾಡಲಾಯಿತು.

ಮಹಾಗಣಪತಿ ಸೇವಾ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ ಭಟ್, ಕೆ. ವಿನಾಯಕ ರಾವ್ ಅವರು ಇನ್ನಷ್ಟು ಸೇವಾಕಾರ್ಯ ಮಾಡುವ ಧೈರ್ಯ, ಹಾಗೆ ದೇವರು ಅವರಿಗೆ ಆರೋಗ್ಯವನ್ನು ಕರುಣಿಸಲಿ ಎಂದು ಅವರ ಹುಟ್ಟುಹಬ್ಬಕ್ಕೆ ಶುಭಹಾರೈಸಿದರು.

ಶ್ರೀಯುತರ ಹುಟ್ಟುಹಬ್ಬದ ಸಂದರ್ಭದಲ್ಲಿ ತನ್ನ ಬದುಕಿನ ಏಳಿಗೆಗಾಗಿ ಮಾರ್ಗದರ್ಶನ ಸಹಕಾರ ನೀಡಿದವರನ್ನು ಸ್ಮರಿಸುತ್ತ. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ನಿರ್ಮಾಣದ ಹಂತದಲ್ಲಿದ್ದು ಬೇರೆ ಬೇರೆ CSR ಗಳಿಂದ, ದಾನಿಗಳಿಂದ ಸಹಕಾರವನ್ನು ಬೇಡಿದ್ದೇವೆ ಹಾಗೆ ಇದರ ನಿರೀಕ್ಷೆಯಲ್ಲಿದೇವೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.



ಫಲಾನುಭವಿಗಳು, ಆರೈಕೆದಾರರು ಹಾಗೂ ಸಿಬ್ಬಂದಿ ವರ್ಗದವರಿಂದ ಹಾಡಿನ ಮೂಲಕ ಮನರಂಜಿಸಲಾಯಿತು ಜೊತೆಗೆ ಶ್ರೀ ಕೆ. ವಿನಾಯಕ ರಾವ್ ಅವರ ಬಗ್ಗೆ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮತ್ತು ಹಣ್ಣಿನ ಗಿಡವನ್ನು ಉಡುಗೊರೆಯಾಗಿ ನೀಡಲಾಯಿತು.

ಕೊಕ್ಕಡ ಕೆನರಾ ಬ್ಯಾಂಕ್ ನ ಶಾಖಾ ವ್ಯವಸ್ಥಾಪಕರಾದ ಶ್ರೀ ಸಾಗರ್, ಕೊಕ್ಕಡದ ನಿವೃತ ಮುಖ್ಯೋಪಾಧ್ಯಾಯರು ಶ್ರೀ ಗಣೇಶ್ ಪಿ. ಐತಾಳ್, ಕನ್ಯಾಡಿ ಸೇವಾಭಾರತಿ (ರಿ.), POSH ಕಮಿಟಿ ಅಧ್ಯಕ್ಷರಾದ ಶ್ರೀಮತಿ ವಸಂತಿಗೌಡ, ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ಹಾಗೂ  ಸಂಸ್ಥೆಯ ದಾನಿಗಳು, ಹಿತೈಷಿಗಳು, ಸನಿವಾಸಿಗಳು, ಆರೈಕೆದಾರರು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ. ಸ್ವಾಗತಿಸಿ, ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್‌ಕುಮಾರ್ ಎಂ. ಮತ್ತು ಕಾರ್ಯಕ್ರಮ ಸಂಯೋಜಕರಾದ ಶ್ರೀ ನಾಗಾರ್ಜುನ್ ಡಿ.ಎ ನಿರೂಪಣೆ ಮಾಡಿ ಧನ್ಯವಾದವಿತ್ತರು.

# ಬೆಂಗಳೂರಿನ ವೆಂಕಟಗಿರಿಯವರಿಂದ ಗಾಲಿಕುರ್ಚಿ ಕೊಡುಗೆ




ಬೆಂಗಳೂರಿನ ವೆಂಕಟಗಿರಿ ಹಾಗೂ ಕುಟುಂಬಸ್ಥರು ಜುಲೈ 31 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಮತ್ತು ಸೌತಡ್ಕ, ಬೆನ್ನುಹುರಿ ಅಪಘಾತ–ಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಳ್ಳುತ್ತಿರುವ ಉಜಿರೆಯ ಶ್ರೀಮತಿ ಲಲಿತಾರವರಿಗೆ ಗಾಲಿಕುರ್ಚಿ–ಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸೇವಾಭಾರತಿಯಿಂದ ಕೇಂದ್ರ ಸಚಿವರ ಭೇಟಿ

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ರಾಜ್ಯ ಸಚಿವರಾದ ಕುಮಾರಿ ಶೋಭಾ ಕರಂದ್ಲಾಜೆಯವರನ್ನು ಜುಲೈ 12 ರಂದು ಭೇಟಿ ಮಾಡಿ ಸೇವಾಧಾಮ ಮಾಡುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ CSR ಅನುದಾನವನ್ನು ಸಂಪರ್ಕಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲ್ಯಾನ್ ಕಾನರ್ಪ, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ, ಕಾರ್ಯಕ್ರಮ ಸಂಯೋಜಕರಾದ ಶ್ರೀ ನಾಗಾರ್ಜುನ್ ಡಿ.ಎ ಉಪಸ್ಥಿತರಿದ್ದರು.




## ಮಹನೀಯ ದಾನಿಗಳು

ಶ್ರೀ ಕೆ ಉಮೇಶ್ ರಾವ್, ಮುಂಡಾಜೆ
ಶ್ರೀ ದಿನಕರ ಶೆಟ್ಟಿ, MLA ಕುಮಟಾ
ಶ್ರೀಮತಿ ನಿವೇದಿತಾ ಪೈ, ಧಾರವಾಡ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಉದಯಶಂಕರ ಕೆ, ಅರಸಿನಮಕ್ಕಿ
ಶ್ರೀ ಹರಿಪ್ರಕಾಶ್ ಶೆಟ್ಟಿ ಬಿ, ಕಾರ್ಕಳ
ಶ್ರೀ ಹರಿಕಿರಣ್‌ಯು.ಆರ್. ಮತ್ತು ಶ್ರೀಮತಿ ಅಪೂರ್ವ ಪಿ.ವಿ, ಬದಿಯಡ್ಕ
ಶ್ರೀ ಪನ್ನಗ ಶೆಟ್ಟಿ, ಬೈಂದೂರ್
ಶ್ರೀ ಹೆಚ್. ತುಷಾರ್, ಮಂಗಳೂರು
ಶ್ರೀ ಗಣೇಶ್ ಗೌಡ ಕಲಾಯಿ, ಕೊಕ್ಕಡ
ಶ್ರೀಮತಿ ಕಮಲಾಕ್ಷಿ ಎನ್. ರಾವ್, ಮುಂಬೈ
ಶ್ರೀ ಕೃಷ್ಣ ಮಂಜುನಾಥ ಪೂಜಾರಿ, ಶಿರಸಿ
ಶ್ರೀ ವೆಂಕಟಗಿರಿ ಪಿ.ಎಂ, ಬೆಂಗಳೂರು
ಶ್ರೀ ಗಿರೀಶ್ ಬಿ.ಕೆ, ಬಂದಾರು
ಶ್ರೀ ಕೆ. ವಿವೇಕ ರಾವ್, ಬೆಂಗಳೂರು
ಶ್ರೀಮತಿ ಪೂರ್ಣಿಮಾ ಕಿಣಿ, ದೊಂಡೋಲೆ
ಶ್ರೀ ಮಂಜುನಾಥ, ಚಿಕ್ಕಬಳ್ಳಾಪುರ
ಶ್ರೀಮತಿ ಲೀಲಾವತಿ ಕಾಮತ್, ನಿಟ್ಟೆ
ಮಾಸ್ಟರ್ ಆರ್ಯನ್ ಅಭಿಷೇಕ್, ಬೆಂಗಳೂರು
ಶ್ರೀ ಗಣೇಶ್ ಪಿ. ಐತಾಳ್, ಕೊಕ್ಕಡ
ಶ್ರೀ ವೆಂಕಟಾದ್ರಿ ನಾಡೆಂಡ್ಲಾ, ರಾಣೆಬೆನ್ನೂರು
ಶ್ರೀ ಡಿ. ಎಂ. ಭಟ್ ಗಿಂಡಾಡಿ, ಪಡಂಗಡಿ
ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
ಶ್ರೀ ಜಿ ದೀಪಕ್ ಭಟ್, ಉಜಿರೆ
ಶ್ರೀ ವಾಗೀಶ್ ಪ್ರಸಾದ್, ರಾಣೆಬೆನ್ನೂರು

## ಸೇವಾನಿಧಿ ದಾನಿಗಳು

ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಕೆ. ಪುರಂದರ ರಾವ್, ನಾರ್ಯ
ಶ್ರೀಮತಿ ಜಯಂತಿ ಪುರಂದರ, ನಾರ್ಯ
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಶ್ರೀ ದಿವ್ಯಾ ಪುರಂದರ, ಬೆಂಗಳೂರು
ಶ್ರೀಮತಿ ವಸಂತಿ ಗೌಡ, ಬೊಲ್ಮ
ಶ್ರೀ ಕಾರ್ತಿಕ್ ಕೆ, ನೇತ್ರಾವತಿ
ಶ್ರೀ ಕೆ ರಾಘವೇಂದ್ರ ಶಾಸ್ತ್ರಿ ಧರ್ಮಸ್ಥಳ
ಶ್ರೀ ಪುರುಷೋತ್ತಮ್ ಡಿ. ಎ, ಧರ್ಮಸ್ಥಳ
ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
ಶ್ರೀ ಸಂತೋಷ್ ಕೆ, ಕೊಕ್ಕಡ
ಶ್ರೀ ಅಖಿಲೇಶ್ ಕೆ. ಎಲ್, ಪುತ್ತೂರು
ಶ್ರೀ ರಜತ್ ಕುಮಾರ್ ಜೆ. ಡಿ, ವೇಣೂರು
ಶ್ರೀ ಶ್ರೀಧರ ಕೆ. ವಿ, ಉಜಿರೆ
ಶ್ರೀ ಕೆ. ರಮೇಶ್ ಪೂಜಾರಿ, ಕನ್ಯಾಡಿ
ಹೋಟೆಲ್ ಬಾಂಬೆ ಡೈನ್, ಉಜಿರೆ
ಶ್ರೀ ಕೆ ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ಕೆ ಶಿವಕುಮಾರ್, ಉಜಿರೆ
ಶ್ರೀ ಮಧುಸೂಧನ್, ಉಜಿರೆ
ಮಾಸ್ಟರ್ ಅದ್ವೈತ ಪೈ, ಕನ್ಯಾಡಿ
ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
ಶ್ರೀ ಗಣೇಶ್ ಭಟ್, ಧರ್ಮಸ್ಥಳ
ಶ್ರೀ ಬಿ ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ

## ವಸ್ತು ರೂಪದಲ್ಲಿ ದೇಣಿಗೆ

ಉಜಿರೆ ಹವ್ಯಕ ವಲಯ, ಉಜಿರೆ
ಅಮೃತ ಶಿಶುನಿವಾಸ, ಬೆಂಗಳೂರು
ಶ್ರೀ ಯಾಸಿನ್ ಪಾಷಾ, ಹಾಸನ
ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ನಿಯೋ ಮೋಶನ್ ಅಸಿಸ್ಟಿವ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ತಮಿಳುನಾಡು
ACE ಡಿಸೈನರ್ ಲಿಮಿಟೆಡ್, ಬೆಂಗಳೂರು
IMPACT ಫೌಂಡೇಶನ್, ಮುಂಬೈ

*The world worries about disability more than disabled people do*

## ಸೇವಾಭಾರತಿಯಿಂದ ಫಿಮ್ ಇಂಡಿಯಾ ಕಂಪೆನಿಗೆ ಭೇಟಿ



ಬೆಂಗಳೂರು, ಫಿಮ್‌ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಶ್ರೀ ಆರ್ಯ ಮತ್ತು ಕು. ಮೃಣಾಲಿನಿಯವರನ್ನು ಜುಲೈ 04 ರಂದು ಭೇಟಿ ಮಾಡಲಾಯಿತು. ಸೇವಾಧಾಮ ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಅವರಿಗೆ ವಿವರಿಸಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕಾಗಿ ಮತ್ತು ಬೈಂದೂರಿನಲ್ಲಿ ನಿರ್ಮಾಣವಾಗುವ ಒತ್ತಡಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಕಂಪೆನಿಯಿಂದ CSR ನ ಮೂಲಕ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.

## ಸೇವಾಭಾರತಿಯಿಂದ ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಭೇಟಿ



ಮೈಸೂರು ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಚೀಫ್ ಜನರಲ್ ಮ್ಯಾನೇಜರ್ ಶ್ರೀ ಅನಂತ ಹೆಗ್ಡೆ ಮತ್ತು ಶ್ರೀ ಗೋಪಾಲಕೃಷ್ಣರವರನ್ನು ಜುಲೈ 24 ರಂದು ಭೇಟಿ ಮಾಡಲಾಯಿತು. ಸೇವಾಧಾಮ ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಅವರಿಗೆ ವಿವರಿಸಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕಾಗಿ ಸಂಸ್ಥೆಯಿಂದ CSR ನ ಮೂಲಕ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಹಿರಿಯ ಪ್ರಬಂಧಕರಾದ ಶ್ರೀ ಚರಣ್‌ಕುಮಾರ್ ಎಂ, ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್. ಉಪಸ್ಥಿತರಿದ್ದರು.

## ಟೈಲರಿಂಗ್ ಶಿಬಿರಾರ್ಥಿಗಳಿಂದ ಸೇವಾಧಾಮಕ್ಕೆ ಭೇಟಿ




ತುಂಬೆತಡ್ಕದಲ್ಲಿ ನಡೆಯುತ್ತಿರುವ 33ನೇ ಉಚಿತ ಟೈಲರಿಂಗ್ ಶಿಬಿರದ ತರಬೇತುದಾರರಾದ ಶ್ರೀಮತಿ ಪ್ರತಿಮಾ, ಅರಿಕೆಗುಡ್ಡೆ ಶ್ರೀ ವನದುರ್ಗ ದೇವಸ್ಥಾನದ ಮಹಿಳಾ ಕಾರ್ಯದರ್ಶಿ ಶ್ರೀಮತಿ ನೀತಾ ರಾಧೇಶ್ ಆಚಾರ್ಯ ಮತ್ತು 21 ಮಂದಿ ಶಿಬಿರಾರ್ಥಿಗಳು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಜುಲೈ 15 ರಂದು ಭೇಟಿ ನೀಡಿ, ಹಣ್ಣನ್ನು ನೀಡಿ ದಿವ್ಯಾಂಗರ ಆರೋಗ್ಯ ವಿಚಾರಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಶ್ರೀ ಸುಬ್ರಹ್ಮಣ್ಯ ಗಣೇಶ ಹೆಗಡೆ




ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ಹೊನ್ನಾವರ ತಾಲೂಕಿನ ಶ್ರೀ ಸುಬ್ರಹ್ಮಣ್ಯ ಗಣೇಶ ಹೆಗಡೆಯವರು ತನ್ನ ಹುಟ್ಟುಹಬ್ಬವನ್ನು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮದಲ್ಲಿ ಜುಲೈ 18 ರಂದು ಮಾದರಿಯಾಗುವಂತೆ ಆಚರಿಸಿಕೊಂಡರು. ಇವರಿಗೆ ಸಂಸ್ಥೆಯ ಪರವಾಗಿ ಶುಭ ಹಾರೈಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ಶ್ರೀಮತಿ ಲೀಲಾವತಿ ಕಾಮತ್‌ರವರಿಂದ ರೂ. 5,000 ದೇಣಿಗೆ



**ಸೌತಡ್ಕ (ಜುಲೈ.23):** ಬೆಳ್ತಂಗಡಿ ತಾಲೂಕಿನ ಶ್ರೀಮತಿ ಲೀಲಾವತಿ ಕಾಮತ್‌ರವರ ಅಳಿಯ ಶ್ರೀ ಗಣೇಶ್ ಪೈ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಧಾಮ ಮಾಡುತ್ತಿರುವ ಕಾರ್ಯಚಟುವಟಿಕೆಗಳಿಗೆ ರೂ. 5,000/– ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸಂಸ್ಥೆಯ ಸಿಬ್ಬಂದಿ ವರ್ಗದವರು ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಇಲಾಖೆಯಿಂದ ಕಾರ್ಮಿಕನಿಗೆ ಲಭ್ಯವಾದ ಪರಿಹಾರ



ಬೆಳ್ತಂಗಡಿ ತಾಲೂಕಿನ ಇಳಂತಿಲ ಗ್ರಾಮದ ಶ್ರೀ ಕೊರಗಪ್ಪ ಕುಂಬಾರರವರು 12 ಸೆಪ್ಟೆಂಬರ್ 2024 ರಂದು ಕಟ್ಟಡದಿಂದ ಕೆಳಗೆ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾಗಿರುತ್ತಾರೆ. ಮೂರು ತಿಂಗಳ ಕಾಲ ಹಾಸಿಗೆಯಲ್ಲಿ ಮಲಗಿ ದಿನವನ್ನು ಕಳೆದ ವ್ಯಕ್ತಿ. ನಂತರ 8 ಜನವರಿ 2025 ರಿಂದ 8 ಮಾರ್ಚ್ 2025 ರವರೆಗೆ ಸೌತಡ್ಕದ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡರು. ಪುನಶ್ಚೇತನ ಪಡೆಯುವ ಸಂದರ್ಭದಲ್ಲಿ ಪುನಶ್ಚೇತನ ಕೇಂದ್ರದ ಕನಿಷ್ಠ ಶುಲ್ಕವನ್ನು ಪಾವತಿಸಲು ಸಾಧ್ಯವಾಗದೆ ಕಾರ್ಮಿಕ ಇಲಾಖೆಯ ಮೊರೆ ಹೋಗಿದ್ದರು. ಅನೇಕ ಕಾರ್ಮಿಕರಿಗೆ ಈ ಬಗ್ಗೆ ಮಾಹಿತಿ ಇಲ್ಲದ ಕಾರಣ ಈ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗದೆ ವಂಚಿತರಾಗಿದ್ದಾರೆ. ಅರ್ಜಿ ಸಲ್ಲಿಕೆಯ ಬಗ್ಗೆ ಸರಿಯಾದ ಮಾರ್ಗದರ್ಶನ ಇಲ್ಲದ ಕಾರಣ, ಸರ್ಕಾರದ ಕಾರಣದಿಂದಾಗಿ ಕೊರಗಪ್ಪ ಅವರಿಗೆ ಇಲಾಖೆಯಿಂದ ಸೌಲಭ್ಯ ಸಿಕ್ಕಿರಲಿಲ್ಲ. ಆ ಸಂದರ್ಭದಲ್ಲಿ ನೆರವಿಗೆ ಬಂದದ್ದು ಭಾರತೀಯ ಮಜ್ದೂರ್ ಸಂಘದ (BMS) ರಾಜ್ಯ ಕಾರ್ಯದರ್ಶಿ ಹಾಗೂ ಸೇವಾಭಾರತಿ ಸಂಸ್ಥೆಯ ಟ್ರಸ್ಟಿ ಶ್ರೀ ಜಯರಾಜ್ ಸಾಲಿಯಾನ್ ಕಾನರ್ಪ. ಕಟ್ಟಡದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾಗಿ ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಶ್ರೀ ಕೊರಗಪ್ಪ ಕುಂಬಾರರಿಗೆ ಕಾರ್ಮಿಕರ ನಿಧಿಯಿಂದ ನೀಡಲ್ಪಡುವ ರೂ. 1,62,000/– ಪರಿಹಾರವನ್ನು ಹಾಗೂ ರೂ. 2,000/– ಮಾಸಿಕ ಪಿಂಚಣಿಯನ್ನು ಭಾರತೀಯ ಮಜ್ದೂರ್ ಸಂಘ ತಾಲೂಕು ಸಮಿತಿ ಬೆಳ್ತಂಗಡಿ ನಿರಂತರ ಇಲಾಖೆಯೊಂದಿಗೆ ಸಂಪರ್ಕಿಸಿದ ಫಲಶ್ರುತಿಯಾಗಿ ಮಂಜೂರಾಗಿರುತ್ತದೆ. ಅನೇಕ ಪ್ರಯತ್ನದ ಸಲುವಾಗಿ ಕೊರಗಪ್ಪ ಅವರಿಗೆ ಈ ಪಿಂಚಣಿ ಲಭಿಸಿರುವುದು ಶ್ಲಾಘನೀಯ. ಪಿಂಚಣಿ ಪರಿಹಾರ ಸಿಗುವಲ್ಲಿ ಶ್ರೀಯುತರ ಕಾರ್ಯ ಅಭಿನಂದನಾರ್ಹ. ಸೇವಾಭಾರತಿ ಸಂಸ್ಥೆಯ ಪರವಾಗಿ ಶ್ರೀ ಜಯರಾಜ್ ಸಾಲಿಯಾನ್ ಕಾನರ್ಪ ಇವರಿಗೆ ತುಂಬು ಹೃದಯದ ಧನ್ಯವಾದಗಳು.

## ಡಿಜಿಟಲ್ ಮಾರ್ಕೆಟಿಂಗ್ ಮತ್ತು ಸೈಬರ್ ಸೆಕ್ಯೂರಿಟಿ ಸ್ಕ್ಯಾಮ್‌ನ ಬಗ್ಗೆ ಮಾಹಿತಿ ಕಾರ್ಯಗಾರ



ಪುತ್ತೂರಿನ ಜಿ–ಟೆಕ್ ಕಂಪ್ಯೂಟರ್ ಎಜುಕೇಶನ್‌ನ ಶ್ರೀ ಆಕಾಶ್ ಜನಾರ್ಧನ್‌ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜುಲೈ 29ರಂದು ಭೇಟಿ ನೀಡಿದರು.

ಡಿಜಿಟಲ್ ಮಾರ್ಕೆಟಿಂಗ್ ಮತ್ತು ಸೈಬರ್ ಸೆಕ್ಯೂರಿಟಿ ಸ್ಕ್ಯಾಮ್ ಆದಾಗ ಸೈಬರ್ ಅಪರಾಧಿಗಳಿಂದ ನಮ್ಮನ್ನು ನಾವು ಹೇಗೆ ರಕ್ಷಿಸಿಕೊಳ್ಳಬೇಕು ಮತ್ತು ನಾವು ಏನು ಮಾಡಬಹುದು, ಸೈಬರ್ ಅಪರಾಧವನ್ನು ನಾವು ಹೇಗೆ ವರದಿ ಮಾಡಬಹುದು ಮತ್ತು ಸೈಬರ್ ಅಪರಾಧಿಗಳ ಬೆದರಿಕೆಯನ್ನು ಹೇಗೆ ಎದುರಿಸಲು ನಮ್ಮಿಂದ ಸಾಧ್ಯ ಎನ್ನುವುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕರಾವ್, ಕನ್ಯಾಡಿ ಸೇವಾಭಾರತಿ (ರಿ.) POSH ಕಮಿಟಿ ಅಧ್ಯಕ್ಷರಾದ ಶ್ರೀಮತಿ ವಸಂತಿಗೌಡ, ಸೇವಾಭಾರತಿ ಸಂಸ್ಥೆಯ ಕಾರ್ಯದರ್ಶಿ ಶ್ರೀ ಬಾಲಕೃಷ್ಣ, ಫಲಾನುಭವಿಗಳು, ಸಿಬ್ಬಂದಿ ವರ್ಗದವರು ಹಾಗೂ ಆರೈಕೆದಾರರು ಉಪಸ್ಥಿತರಿದ್ದರು.

*When everyone else says you can't determination says, YES YOU CAN'*

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಬೆನ್ನೆಲುಬಾಗುವಿರಾ?

## ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿದೆ ನೂತನ "ಸೇವಾಧಾಮ" ಪುನಶ್ಚೇತನ ಕೇಂದ್ರ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯ –ಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ –ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/– ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ ಮಂಗಳೂರಿನ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು, ನಿರ್ಮಾಣಕಾರ್ಯ ಭರದಿಂದ ಸಾಗುತ್ತಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್‌ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ.

> ಒಟ್ಟು ಮೊತ್ತ ರೂ. 3,05,72,580/– ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL ರೂ. 42 ಲಕ್ಷದಷ್ಟು ನೀಡಲಿದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ–ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD

237887292400920@cnrb

Scan & Pay also

A/c Name : Sevabharathi
Current A/c No : 120000400920
IFSC : CNRB0010246
Canara Bank, Dharmasthala Branch

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ



ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಜುಲೈ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಸರ್ಜನ್ ಡಾ। ವೈಶಾಕ್ ಬಿ. ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 7 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ಹುಟ್ಟು ಹಬ್ಬದ ಪ್ರಯುಕ್ತ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ಶ್ರೀಮತಿ ಮೀನಾಕ್ಷಿ ಜಿ ಭಟ್ ಇವರಿಂದ ದೇಣಿಗೆ



ಧರ್ಮಸ್ಥಳ ಗ್ರಾಮದ ಜೋಡುಸ್ಥಾನ ನಿವಾಸಿಯಾಗಿರುವ ಶ್ರೀಮತಿ ಮೀನಾಕ್ಷಿ ಜಿ. ಭಟ್ ಮತ್ತು ಶ್ರೀ ಸುರೇಶ್ ಭಟ್‌ರವರು ಕನ್ಯಾಡಿ ಸೇವಾನಿಕೇತನಕ್ಕೆ ಜುಲೈ 30 ರಂದು ಭೇಟಿ ನೀಡಿದರು.

ಶ್ರೀಮತಿ ಮೀನಾಕ್ಷಿ ಜಿ. ಭಟ್ ರವರ ಹುಟ್ಟುಹಬ್ಬದ ಪ್ರಯುಕ್ತ ಸೇವಾಧಾಮ ಮಾಡುತ್ತಿರುವ ಕಾರ್ಯಚಟುವಟಿಕೆಗಳಿಗೆ ದೇಣಿಗೆಯನ್ನು ಮತ್ತು 25 ಕೆ.ಜಿ ಬೆಳ್ತಿಗೆ ಅಕ್ಕಿ ನೀಡಿ ಸಹಕರಿಸಿದ್ದಾರೆ.

ಈ ಸಂದರ್ಭದಲ್ಲಿ ಸಿಬ್ಬಂದಿವರ್ಗ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಶುಭಹಾರೈಸಲಾಯಿತು.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಜುಲೈ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಶ್ರೀ ಯಾಸಿನ್ ಪಾಷಾ, ಹಾಸನ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ರವಿಪ್ರಸಾದ್ ಆದ ನಾನು ಸುಳ್ಯ ತಾಲೂಕು ದಕ್ಷಿಣಕನ್ನಡ ಜಿಲ್ಲೆಯ ಸುಳ್ಯದ ಕೆರಪಳ್ಳದವನಾಗಿದ್ದು 23/04/2023 ರಂದು ಅಡಿಕೆ ಮರಕ್ಕೆ ಔಷಧಿ ಸಿಂಪಡಿಸಲು ಹೋಗಿ ಮರದಿಂದ ಬಿದ್ದಿರುತ್ತೇನೆ. ನಂತರ ಅಡಿಕೆ ತೋಟದ ಯಜಮಾನ ಕೆವಿಜಿ ಮೆಡಿಕಲ್ ಕಾಲೇಜ್‌ಗೆ ಕರೆದುಕೊಂಡು ಹೋಗಿ x-ray ಮಾಡಿಸಿದ ನಂತರ ಸರ್ಜರಿ ಆಗಬೇಕೆಂದು ತಿಳಿಸಿದರು. ಹಾಗಾಗಿ ಮಂಗಳೂರಿನ ಕೆ.ಎಸ್. ಹೆಗ್ಡೆ ಆಸ್ಪತ್ರೆಯಲ್ಲಿ ಸರ್ಜರಿ ಆಯಿತು. ನಂತರ ಅಲ್ಲಿಯೇ ಮೂರು ತಿಂಗಳು ಥೆರಪಿ ತೆಗೆದುಕೊಂಡು ನನ್ನ ಗೆಳೆಯನ ಸಹೋದರ ಸೇವಾಧಾಮದ ಬಗ್ಗೆ ನನಗೆ ವಿಚಾರ ತಿಳಿಸಿ ಇಲ್ಲಿನ ಕಾರ್ಡಿನೇಟರ್ ಕುಸುಮಾಧರ್ ಸರ್ 3 ಬಾರಿ ನಮ್ಮ ಮನೆಗೆ ಭೇಟಿ ನೀಡಿ ಸೇವಾಧಾಮದ ಬಗ್ಗೆ ವಿಷಯ ತಿಳಿಸಿದರು. ನಂತರ ನಾನು ಸೇವಾಧಾಮಕ್ಕೆ ಬಂದೆ.

ನಾನು ಸೇವಾಧಾಮಕ್ಕೆ ಬರುವಾಗ ಪೂರ್ತಿ ಮಲಗಿದಲ್ಲೇ ಇದ್ದೆ. ನನ್ನ ಯಾವ ಕೆಲಸವನ್ನು ನನ್ನಿಂದ ಮಾಡಿಕೊಳ್ಳಲು ಆಗುತ್ತಿರಲಿಲ್ಲ. ಆದರೆ ಈಗ ನನ್ನ ದಿನನಿತ್ಯದ ಎಲ್ಲಾ ಕೆಲಸಗಳನ್ನು ಯಾರ ಸಹಾಯವಿಲ್ಲದೆ ನಾನೇ ಮಾಡಿಕೊಳ್ಳುತ್ತೇನೆ. ನಾನು ಸೇವಾಧಾಮಕ್ಕೆ ಬರುವಾಗ ನನ್ನ ಬಳಿ ವೀಲ್‌ಚೇರ್ ಇರಲಿಲ್ಲ ಆದರೆ ಈಗ ವೀಲ್‌ಚೇರ್ ತೆಗೆದು ಕೊಂಡಿದ್ದೇನೆ. ಹಾಗೆ ವೀಲ್‌ಚೇರ್ ನಿಂದ ಬೆಡ್‌ಗೆ ನಾನೇ ಶಿಫ್ಟ್ ಆಗುತ್ತೇನೆ. ಇಲ್ಲಿ ಬಂದ ನಂತರ ಬೆಳಗ್ಗಿನ ಯೋಗವನ್ನು ಆಂಥೋನಿ ಅವರು ನನಗೆ ತಿಳಿಸಿಕೊಟ್ಟರು. ಪ್ರತಿನಿತ್ಯ ನನಗೆ ಥೆರಪಿಯನ್ನು ವಿರೂಪಾಕ್ಷ ಸರ್ ಚೆನ್ನಾಗಿ ಹೇಳಿಕೊಟ್ಟಿದ್ದಾರೆ. ಹಾಗೆ ವಿಖ್ಯಾತಿ ಮೇಡಂ ಕೂಡ ಥೆರಪಿಯನ್ನು ಚೆನ್ನಾಗಿ ಮಾಡಿಸಿದ್ದಾರೆ. ಈಗ ನಾನು ಕ್ಯಾಲಿಪರ್ ಮತ್ತು ವಾಕರ್ ಸಹಾಯದಿಂದ ನಡೆಯುತ್ತೇನೆ.

ಅಕ್ಷತಾ ಮೇಡಂ ನಮ್ಮ ಯಾವುದೇ ಸಮಸ್ಯೆಯನ್ನು ಸಮಾಧಾನವಾಗಿ ತಿಳಿಸಿಕೊಟ್ಟಿದ್ದರು. ನನಗೆ ಸೇವಾಧಾಮಕ್ಕೆ ಬಂದು ತುಂಬಾ ಖುಷಿಯಾಗಿದೆ ಹಾಗೆಯೇ ಈ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ಸರ್‌ಗೆ ನಾನು ತುಂಬಾ ಧನ್ಯವಾದಗಳನ್ನು ತಿಳಿಸುತ್ತೇನೆ. ಹಾಗೂ ಸೇವಾಭಾರತಿ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಇತಿ ನಿಮ್ಮ ವಿಶ್ವಾಸಿ,

**ರವಿ ಪ್ರಸಾದ್ ಸುಳ್ಯ**

*I dont need easy, I just need possible*

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು
ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.
ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...





ಶ್ರೀ ಕೆ. ವಿನಾಯಕ ರಾವ್
ಕನ್ಯಾಡಿ



ಮಾಸ್ಟರ್ ಆರ್ಯನ್
ಅಭಿಷೇಕ್, ಬೆಂಗಳೂರು



ಶ್ರೀ ಕಿರಣ್‌ಚಂದ್ರ ಡಿ.
ಪುಷ್ಪಗಿರಿ



ಶ್ರೀ ಕೆ. ವಿವೇಕ್ ರಾವ್
ಕನ್ಯಾಡಿ –2



ಶ್ರೀ ಕೃಷ್ಣ ಪೂಜಾರಿ
ಶಿರಸಿ



ಶ್ರೀ ಕುಂಞಪ್ಪ ಗೌಡ ಕೆ.
ಕೊಕ್ಕಡ



ರೋ. ಉದಯ ಶಂಕರ್ ಕೆ
ಅರಸಿನಮಕ್ಕಿ



ಶ್ರೀ ಸುಬ್ರಹ್ಮಣ್ಯ ಗಣೇಶ್ ಹೆಗಡೆ
ಹೊನ್ನಾವರ



ಶ್ರೀ ಗಿರೀಶ್‌ಗೌಡ ಬಿ ಕೆ,
ಬಂದಾರು





ಶ್ರೀ ಅಕ್ಷಯ ಪಾಟಾಲಿ ಪಿ,
ಬಡಕಯೂರು

## ಜುಲೈ ತಿಂಗಳ ಸೇವಾ ಕಾರ್ಯಗಳು

1. ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ – 26
2. ನಿಯೋ ಮೋಶನ್ ವಿಥ್ ಕಾರ್ಟ್ ವಿತರಣೆ – 4
3. ಗಾಲಿಕುರ್ಚಿ ವಿತರಣೆ – 1
4. ಕೇಂದ್ರದಲ್ಲಿ ಪ್ರಸ್ತುತ ಪುನಶ್ಚೇತನಗೊಳುತ್ತಿರುವವರು – 10
5. ಹೊಸ ಗುರುತಿಸುವಿಕೆ – 7

*Disability cannot stop me from becoming a complete personality*

## ನಿಮಗಿದು ತಿಳಿದಿರಲಿ

# ಸ್ಪೈನಲ್ ಟಿಬಿ ಎಂದರೇನು?

ಸ್ಪೈನಲ್ ಟಿಬಿ ಎಂದರೆ ಕ್ಷಯ ರೋಗ (Tuberculosis) ಬೆನ್ನುಮೂಳೆಯ (vertebrae) ಅಥವಾ disc ಪ್ರದೇಶವನ್ನು ಹಾನಿಗೊಳಿಸುವ ಸ್ಥಿತಿ. ಇದನ್ನು "Pott's Disease" ಎಂದು ಸಹ ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಫೆಫಸಿಗೆ ಆಗುವ TB ನಿಂದ ಹರಡುತ್ತದೆ.

ಸ್ಪೈನಲ್ ಟಿ ಬಿ ಎನ್ನುವುದು ಗಂಭೀರ ಆದರೆ ಚಿಕಿತ್ಸೆ ಸಾಧ್ಯವಾದ ಕ್ಷಯ ರೋಗವಾಗಿದೆ. ಆರಂಭದಲ್ಲಿ ಗುರುತಿಸಿ ಸರಿಯಾದ ಔಷಧ, ವಿಶ್ರಾಂತಿ, ಫಿಸಿಯೋಥೆರಪಿ ಮತ್ತು ಆಹಾರದಿಂದ ಪೂರ್ಣವಾಗಿ ಗುಣಪಡಬಹುದು. ಚಿಕಿತ್ಸೆ ಬಾಕಿ ಇದ್ದರೆ deformity ಅಥವಾ ಕಾಲುಗಳ ಚಲನೆಯ ಕೊರತೆ ಉಂಟಾಗಬಹುದು.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |

## DONATE & JOIN US IN OUR MISSION

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

## Support us for constructions of Rehabilitation Centre

| | |
|---|---|
| A/c Holder | - M/s. Sevabharathi(R) |
| A/C NUMBER | - 120000400920 |
| IFSC CODE | - CNRB0010246 |
| BANK TYPE | - CURRENT ACCOUNT |

*We are put in situations to build our character... not destroy us*

# ಸೇವಾಧಾಮದಲ್ಲಿ ಪುನಶ್ಚೇತನಗೊಂಡು ನರ್ಸರಿಯ ಮೂಲಕ ಜೀವನವನ್ನು ರೂಪಿಸಿಕೊಂಡ ಚಿಕ್ಕಮಗಳೂರಿನ ನಂದನ್ ಎಚ್.ಬಿ.ಯವರ ಯಶೋಗಾಥೆ





ನಂದನ್ ಎಚ್.ಬಿ. ಇವರು ಮೂಲತಃ ದೇವದಾನ ಗ್ರಾಮದ ಚಿಕ್ಕಮಗಳೂರು ತಾಲೂಕಿನ ನಿವಾಸಿಯಾಗಿದ್ದು, ಅಕ್ಟೋಬರ್ 25, 1995 ರಲ್ಲಿ ಶ್ರೀ ಬೋಬಣ್ಣ ಮತ್ತು ಶ್ರೀಮತಿ ಜಯ ದಂಪತಿಯ ಪುತ್ರರಾಗಿ ಜನಿಸಿದರು. ದೇವರಗುಡ್ಡೆ ಆಶ್ರಮದಲ್ಲಿ ಪ್ರಾಥಮಿಕ ಶಿಕ್ಷಣ ತದನಂತರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಣತಿಯಲ್ಲಿ ಪ್ರೌಢ ಶಿಕ್ಷಣವನ್ನು ಮತ್ತು ಬಾಳೆಹೊನ್ನೂರಿನಲ್ಲಿ ಪಿಯುಸಿ ಶಿಕ್ಷಣವನ್ನು ಮಾಡುತ್ತಿರುವಾಗ ಆರೋಗ್ಯ ಸಮಸ್ಯೆಯಿಂದ ತನ್ನ ಶಿಕ್ಷಣವನ್ನೇ ಅರ್ಧಕ್ಕೆ ಕೈ ಬಿಟ್ಟರು. ನಂತರ ಕೆಲಸಕ್ಕಾಗಿ ಬೆಂಗಳೂರಿನ ಹತ್ತಿರ ಪಯಣ ಬೆಳೆಸಿದರು. 6 ವರ್ಷ ಬೆಂಗಳೂರಿನಲ್ಲಿ ವಂದೇ ಮಾತರಂ ಸಮಾಜ ಸೇವೆ ಕರ್ನಾಟಕ ಬೆಂಗಳೂರು ಇವರ ಜೊತೆಯಲ್ಲಿ ಇದ್ದು ಎಲ್ಲ ಕೆಲಸವನ್ನು ಮಾಡುತ್ತಿದ್ದರು.

ತನ್ನ ವೃತ್ತಿಯನ್ನು ಮಾಡುತ್ತ ಜೀವನವನ್ನು ಸಾಗಿಸುತ್ತಿದ್ದ ನಂದನ್‌ರವರು ಒಂದು ದಿನ ಕೆಲಸವನ್ನು ಮುಗಿಸಿ ಬೆಂಗಳೂರಿನಿಂದ ತನ್ನ ಊರಿಗೆ ಬಂದಾಗ 5 ಜೂನ್ 2021 ರಂದು ಮನೆಯ ಪಕ್ಕದಲ್ಲಿರುವ ಮರದ ರೆಂಬೆಯನ್ನು ಕಡಿಯಲು ಮುಂದಾದರು. ಮರದ ರೆಂಬೆಯನ್ನು ಕಡಿಯುತ್ತಿದ್ದ ವೇಳೆ ಆಯಾ ತಪ್ಪಿ ಕೆಳಕ್ಕೆ ಬಿದ್ದರು. ಎಳೆಯ ವಯಸ್ಸಿನಲ್ಲಿಯೇ ಅವರ ಜೀವನದ ದಿಕ್ಕನ್ನೇ ಬದಲಾಯಿಸಿ ಬಿಟ್ಟಿತು. ತಕ್ಷಣ ಅವರನ್ನು ಕೊಪ್ಪದ ಪ್ರಶಮನಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮುಂದಿನ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಫಾದರ್ ಮುಲ್ಲಾರ್ ಆಸ್ಪತ್ರೆಗೆ ಬಂದರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ 'ಬೆನ್ನುಹುರಿ ಅಪಘಾತ ಕ್ಕೊಳಗಾಗಿದ್ದಾರೆ, ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ' ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು. ಈ ವಿಷಯವನ್ನು ಕೇಳಿದ ಬಳಿಕ ಇನ್ನು ಜೀವನದಲ್ಲಿ ಕತ್ತಲೆಯೇ ಆವರಿಸಿ ಬಿಟ್ಟಿತ್ತು, ನನ್ನ ಬದುಕಿನ ಹಾದಿ ಇಲ್ಲಿಗೆ ಮುಗಿದು ಹೋಯಿತು ಅನ್ನುವಷ್ಟಕ್ಕೆ ಮನಸ್ಥಿತಿ ಹಾಳುಗೆಡವಿಕೊಂಡಿದ್ದರು. ಈ ಸಂದರ್ಭದಲ್ಲಿ ಬೆನ್ನೆಲುಬಾಗಿ ನಿಂತದ್ದು ನಂದನ್ ಅವರ ಅಣ್ಣ ನವೀನ್ ಮತ್ತು ಗೆಳೆಯರು. ಎಲ್ಲಾ ಕಷ್ಟದಲ್ಲೂ ಜೊತೆಯಾಗಿ ನಿಂತು ಸಾಥ್ ಕೊಡುತ್ತಿದ್ದರು. ಶಸ್ತ್ರಚಿಕಿತ್ಸೆ ಆದ ಮೇಲೆ ಆಸ್ಪತ್ರೆಯಲ್ಲಿಯೇ ಇದ್ದು 1 ತಿಂಗಳ ಚಿಕಿತ್ಸೆಯನ್ನು ಪಡೆದುಕೊಂಡರು. ಚಿಕಿತ್ಸೆಯನ್ನು ಪಡೆದ ನಂತರ 2– 3 ತಿಂಗಳ ಕಾಲ ಮಲಗಿದಲ್ಲೇ ತನ್ನ ಜೀವನವನ್ನು ಹಾಸಿಗೆಯಲ್ಲೇ ಕಳೆದರು. ಎಳೆಯ ವಯಸಿನಲ್ಲೇ ಆದಂತಹ ಈ ದುರ್ಘಟನೆ ಅವರ ಮನಸನ್ನೇ ಆವರಿಸಿಬಿಟ್ಟಿತ್ತು. ಇನ್ನು ನನ್ನಿಂದ ಏನೂ ಮಾಡಲು ಸಾಧ್ಯವಾಗದು ನನ್ನ ಜೀವನ ಇಲ್ಲಿಗೆ ಮುಗಿದು ಹೋಯಿತು ಎಂದು ಆಸೆಯನ್ನೇ ಬಿಟ್ಟಿದ್ದ ನಂದನ್ ಅವರಿಗೆ ಪರಿಚಯವಾದದ್ದು "ಸೇವಾಧಾಮ."

2023 ರಲ್ಲಿ 3 ತಿಂಗಳ ಪಯಣವನ್ನು ಸೇವಾಧಾಮದಲ್ಲಿ ಕಳೆದರು. ಪುನಶ್ಚೇತನವನ್ನು ಪಡೆದುಕೊಂಡು ಒತ್ತಡಗಾಯವನ್ನು ಹೇಗೆ ನಿವಾರಣೆ ಮಾಡಬೇಕು, ವೀಲ್‌ಚೇರ್ ನಿಂದ ಹೇಗೆ ಶಿಫ್ಟ್ ಆಗೋದು ಎಂಬುದರ ಬಗ್ಗೆ ತಿಳಿದುಕೊಂಡು ಸ್ವಲ್ಪ ಚೇತರಿಸಿಕೊಳ್ಳುತ್ತ ಬಂದರು. ಸೇವಾಧಾಮದಿಂದ ಅನೇಕ ಸೌಲಭ್ಯವನ್ನು ಪಡೆದುಕೊಂಡು ಜೀವನದಲ್ಲಿ ಏನಾದರೂ ಸಾಧಿಸಬಹುದೆಂಬ ಭರವಸೆಯನ್ನು ಕಂಡುಕೊಂಡರು. ಪುನಶ್ಚೇತನವನ್ನು ಪಡೆದುಕೊಂಡ ನಂತರ ದೇವದಾನದಲ್ಲಿಯೇ ನರ್ಸರಿಯನ್ನು ಮಾಡಲು ಪ್ರಾರಂಭಿಸಿದರು. ಚಿಕ್ಕ ಗಿಡವನ್ನು ತಾನೇ ಪೋಷಿಸಿ ಅದಕ್ಕೆ ಗೊಬ್ಬರವನ್ನು ಹಾಕಿ ಸ್ವಲ್ಪ ದೊಡ್ಡದಾದ ಮೇಲೆ ಮಾರಾಟವನ್ನು ಮಾಡುತ್ತಿದ್ದಾರೆ ಮತ್ತು ಸೆಲ್ಕೋ ಫೌಂಡೇಶನ್‌ನವರ ಆಶ್ರಯದಲ್ಲಿ ನೀಡಿದಂತಹ ಯಂತ್ರವನ್ನು ಮತ್ತು ನಿಯೋ ಮೋಶನ್ ವಿಥ್ ಕಾರ್ಟ್ ಅನ್ನು ಬಳಸಿಕೊಂಡು ಬೇಕರಿ ತಿಂಡಿಗಳ ಸ್ವ–ಉದ್ಯೋಗ ಮಾಡುವ ಆಲೋಚನೆಯನ್ನು ಇಟ್ಟುಕೊಂಡಿದ್ದಾರೆ. ಸ್ವಾವಲಂಬಿಯಾಗಿ ತನ್ನ ಜೀವನ–ವನ್ನು ರೂಪಿಸಿಕೊಳ್ಳಲು ಮುಂದಾಗಿರುವುದು ಎಲ್ಲರಿಗೂ ಸ್ಫೂರ್ತಿದಾಯಕ ಕಥೆಯಾಗಿದೆ. ಇವರ ಯಶಸ್ಸಿಗೆ ನಾವೆಲ್ಲರೂ ಶುಭ ಹಾರೈಸೋಣವೇ.